ವರದಿಯನ್ನೊಪ್ಪಿಸುವುದು

ಶ್ರೀ ಲಕ್ಷ್ಮಿನರಸಿಂಹಯ್ಯ.—(ಉಪಾಧ್ಯಕ್ಷರು)

ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನು ಸಭೆಯ ಮುಂದೆ ಮಂಡಿಸತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಇಡಲಾಗಿದೆ.

ಶ್ರೀ ಆರ್. ರಾಮಯ್ಯ.—ಈ ವರದಿಯನ್ನು ಸಭೆ ಒಪ್ಪಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆ ಒಪ್ಪುವುದೆಂದು ಭಾವಿಸುತ್ತೇನೆ.

ಮನವಿಗಳನ್ನೊಪ್ಪಿಸುವುದು

ಶ್ರೀ ಮಲ್ಲಾರಿಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ. ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಮಂಣಗಂತ್ತಿ ಗ್ರಾಮದಲ್ಲಿ ಘಟಪ್ರಭಾ ನದಿಯಿಂದ ಏತ ನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ.

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನಲ್ಲಿ ರಫಂಗಟಿಹಾಳ ಏತ ನೀರಾವರಿ ಯೋಜನೆಯಂ ಸ್ಥಗಿತ ಗೊಂಡಿರುವ ಬಗ್ಗೆ.

ಮತ್ತು ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಕೊಟಬಾಗಿ, ಹುಲ್ಲೋಳಿ, ಹಾಗೂ ಇನ್ನಿತರ ಹಳ್ಳಿಗಳಿಗೆ ಏತ ನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ. ಈ ಮೂರು ವಿಷಯಗಳ ಬಗ್ಗೆ ಇರುವ ಮನವಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮನವಿಗಳನ್ನು ಒಪ್ಪಿಸಲಾಯಿತು.

ಶಾಸನ ರಚನಾ ಕಾರ್ಯಕಲಾಪಗಳು

೧೯೮೬ ನೇ ಇಸವಿಯ ಕರ್ನಾಟಕ ಸಂಚಾರಿ ನಿಯಂತ್ರಣ (ತಿದ್ದುಪಡಿ) ವಿಧೇಯಕ ಪುಂಡನೆಗೆ ಅನುಮತಿ ಕೋರಿಕೆ.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಮಂತ್ರಿಗಳ ಪರವಾಗಿ ೧೯೮೬ ನೇ ಇಸವಿಯ ಕರ್ನಾಟಕ ಸಂಚಾರಿ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

''೧೯೮೬ನೇ ಇಸವಿಯ ಕರ್ನಾಟಕ ಸಂಚಾರಿ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕು''.

ಪ್ರಸ್ತಾವ ಅಂಗೀಕೃತವಾಗಿದೆ ಮತ್ತು ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ. ಮೇಲ್ಕಂಡ ೧೯೮೬ನೇ ಇಸವಿಯ ಕರ್ನಾಟಕ ವಿಧೇಯಕವನ್ನು ಸಂಚಾರಿ ನಿಯಂತ್ರಣ (ತಿದ್ದುಪಡಿ) ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೬ನೇ ಇಸವಿಯ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ. ಸಾರಿಗೆ ಸಚಿವರ ಪರವಾಗಿ ೧೯೮೬ ನೇ ಇಸವಿಯ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.